C.R.P.67

Form No.4 (Civil)
Deposition Sheets
(R.P.No.57)

1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.39/2021

ದಿನಾಂಕಃ 01.02.2023 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ :8 ಪಿ. ಡಬ್ಲ್ಯೂ :8

| | |
|---|---|
| ಸಾಕ್ಷಿದಾರರ ಹೆಸರು | ಗಗನ್ |
| ತಂದೆಯ ಹೆಸರು | ವೆಂಕಟೇಶ್ |
| ವಯಸ್ಸು | 20 ವರ್ಷ |
| ಉದ್ಯೋಗ | ವಿದ್ಯಾರ್ಥಿ |
| ವಾಸ | ಗಾಂಧಿನಗರ, ಮಂಡ್ಯ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 10 ವರ್ಷಗಳಿಂದ ನಾನು ಮೇಲೆ ಹೇಳಿರುವ ವಿಳಾಸದಲ್ಲಿ ವಾಸವಿದ್ದೇನೆ. ಮಂಡ್ಯದಲ್ಲಿ ಇರುವ ಮರಿಗೌಡ ಬಡಾವಣೆ ಗೊತ್ತು. ನಮ್ಮ ಗಾಂಧಿನಗರದಿಂದ, ಮರಿಗೌಡ ಬಡಾವಣೆಗೆ ಒಂದರಿಂದ ಒಂದುವರೆ ಕಿ.ಮಿ ದೂರ ಇದೆ. ನಾನು ಅನ್ನಪೂರ್ಣೇಶ್ವರಿ ನಗರದಲ್ಲಿ ಇರುವ ಹಸು ಫಾರಂ ನಲ್ಲಿ ಕೆಲಸ ಮಾಡುತ್ತಿದ್ದೆನು. ಫಾರಂನ ಒನರ್ ಮರಿಗೌಡ ಬಡಾವಣೆಯಲ್ಲಿ ಇದ್ದರು, ನಾನು ಬೀಗವನ್ನು ತೆಗೆದುಕೊಳ್ಳಲು ಮರಿಗೌಡ ಬಡಾವಣೆಗೆ ಒನರ್ ಮನೆಗೆ ಸುಮಾರು ಮದ್ಯಾಹ್ನ 1.45 ರಿಂದ 2.30 ಗಂಟೆ ಸಮಯದಲ್ಲಿ ಹೋಗಿದ್ದೆನು. ಬೀಗವನ್ನು ತೆಗೆದುಕೊಂಡು ಆಟೋ ಸ್ಟ್ಯಾಂಡ್ ಹತ್ತಿರ ನಡೆದುಕೊಂಡು ಬರುತ್ತಿರುವಾಗ , ಪೊಲೀಸರು ಇಲ್ಲಿ ಗಲಾಟೆ ಆಗಿದೆ, ಮಹಜರ್ ಗೆ ಬಾ ಅಂತ ಕರೆದರು. ಗಲಾಟೆಯಾಗಿದ್ದ ಜಾಗವು ಚಾಸಾ.1 ರವರ ಮನೆಯ ಮುಂದೆ ಇದ್ದ ಜಾಗವಾಗಿತ್ತು. ಸದರಿ ಜಾಗದಲ್ಲಿ ಚಾಸಾ.1, ಪೊಲೀಸರು, ಚಾಸಾ.3 ರಘು ಮತ್ತು ನಾನು ಇದ್ದೆವು. ಪೊಲೀಸರು ಘಟನಾ ಸ್ಥಳದಲ್ಲಿ ಇದ್ದ ಕುಡುಲು, ದೊಣ್ಣೆ, ಕಲ್ಲು ಮತ್ತು ಮಚ್ಚನ್ನು ತೆಗೆದುಕೊಂಡರು. ಚಾಸಾ.1 ರವರು ಈ ವಸ್ತುಗಳನ್ನು ಪೊಲೀಸರಿಗೆ ತೋರಿಸಿಕೊಟ್ಟರು. ಚಾಸಾ.1 ರವರಿಗೆ ತಲೆಗೆ , ಕಿವಿಗೆ, ಕೈಗಳಿಗೆ ಏಟಾಗಿತ್ತು. ಪೊಲೀಸರು ಘಟನಾ ಸ್ಥಳದಲ್ಲಿ ಬರವಣಿಗೆ ಮಾಡಿದರು.ಅದಕ್ಕೆ ನನ್ನ ಸಹಿಯನ್ನು ಹಾಕಿಸಿಕೊಂಡಿದ್ದರು, ಸದರಿ ನಿಪಿ.2 ಬರವಣಿಗೆಯನ್ನು ಈಗ

ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ನಿಪಿ.2 ಕ್ಕೆ ನಾನು ಮತ್ತು ರಘು ಸಹಿ ಮಾಡಿದೆನು. ಬೇರೆ ಯಾರು ಸಹಿ ಮಾಡಿದರು ಅಂತ ನೆನಪಿಲ್ಲ. ಸಹಿ ಮಾಡುವಾಗ ಸಮಯ ಮದ್ಯಾಹ್ನ 3.00 ರಿಂದ 3.30 ಗಂಟೆ ಆಗಿತ್ತು. ಮಹಜರ್ ಮಾಡಿದ ಸ್ಥಳದ ಸುತ್ತಾ ಮುತ್ತಾ ಚಾಸಾ.1 ಮತ್ತು ಇತರೆ ಮನೆಗಳು ಇತ್ತು . ನನಗೆ ತೋರಿಸಿದ ನಿಪಿ.3 ಮತ್ತು 4 ಫೋಟೋದಲ್ಲಿ ಕಲ್ಲು ಇದೆ. ನನಗೆ ತೋರಿಸಿದ ನಿಪಿ.5 ಮತ್ತು 6 ಫೋಟೋಗಳಲ್ಲಿ ಚಾಸಾ.1 ರವರ ಮನೆ ಇದೆ. ಸದರಿ ಫೋಟೋದಲ್ಲಿ ನಾನು, ಚಾಸಾ.1 ತಿರುಮಲ , ಚಾಸಾ.3 ರಘು ಮತ್ತು ಪೊಲೀಸರು ಇದ್ದೇವೆ. ಪೊಲೀಸರ ಹೆಸರು ಗೊತ್ತಿಲ್ಲ. ನನಗೆ ತೋರಿಸಿದ ನಿಪಿ.7 ಮತ್ತು 8 ಫೋಟೋಗಳಲ್ಲಿ ನಾನು, ಚಾಸಾ.1 ತಿರುಮಲ , ಚಾಸಾ.3 ರಘು ಮತ್ತು ಪೊಲೀಸರು ಇದ್ದೇವೆ. ನಿಪಿ.7 ಫೋಟೋದಲ್ಲಿ ಚಸಾ.1 ತಿರುಮಲ ರವರ ಕೈಯಲ್ಲಿ ಕುಡುಲು ಇದೆ. ನಿಪಿ.8 ಫೋಟೋದಲ್ಲಿ ಚಾಸಾ.1 ತಿರುಮಲ ರವರ ಕೈಯಲ್ಲಿ ದೊಣ್ಣೆ ಇದೆ. ನನಗೆ ತೋರಿಸಿದ ನಿಪಿ.9 ಮತ್ತು 10 ಫೋಟೋಗಳಲ್ಲಿ ನಾನು, ಚಾಸಾ.1 ತಿರುಮಲ , ಚಾಸಾ.3 ರಘು ಮತ್ತು ಪೊಲೀಸರು ಇದ್ದೇವೆ. ನಿಪಿ.9 ಫೋಟೋದಲ್ಲಿ ಚಾಸಾ.1 ತಿರುಮಲ , ಪೊಲೀಸರಿಗೆ ಕುಡಲನ್ನು ಕೊಡುತ್ತಿದ್ದಾರೆ . ನಿಪಿ.9 ಫೋಟೋದಲ್ಲಿ ಚಾಸಾ.10 ತಿರುಮಲ , ಪೊಲೀಸರಿಗೆ ದೊಣ್ಣೆಯನ್ನು ಕೊಡುತ್ತಿದ್ದಾರೆ .

ಶಂಕರ್ ಎಂಬುವರು, ಚಾಸಾ.1 ತಿರುವಲ ರವರ ತಂದೆಯ ತಲೆ ಮೇಲೆ ಕಲ್ಲನ್ನು ಎತ್ತಿ ಹಾಕಿದ್ದಾರೆ ಎಂದು ಗೊತ್ತಾಯಿತು. ಪೊಲೀಸರು ಮಹಜರ್ ಸಮಯದಲ್ಲಿ ಘಟನಾ ಸ್ಥಳದಿಂದ ತೆಗೆದುಕೊಂಡಿದ್ದ ಕುಡುಲು, ದೊಣ್ಣೆ, ಕಲ್ಲು ಮತ್ತು ಮಚ್ಚನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.1 ರಿಂದ 6 ನ್ನು ನೋಡಿ ಗುರುತಿಸಿದ್ದಾರೆ. ಮು.ಮಾ.1 ರಿಂದ 5 ವಸ್ತುಗಳ ಬಗ್ಗೆ ಚಾಸಾ.1 , ಪೊಲೀಸರಿಗೆ ಏನು ಮಾಹಿತಿಯನ್ನು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ಚಾಸಾ.1 ರವರಿಗೆ ಯಾವ ವಸ್ತುವಿನಿಂದ ಏಟಾಗಿತ್ತು ಅಂತ ನನಗೆ ಗೊತ್ತಾಗಲಿಲ್ಲ. ಅದೇ ದಿವಸ ರಾತ್ರಿ 9.30 ರಿಂದ 9.45 ಗಂಟೆಯಲ್ಲಿ ಪೊಲೀಸರು ನನನಗೆ ಫೋನ್ ಮಾಡಿ ಠಾಣೆಗೆ ಕರೆಸಿಕೊಂಡರು. ನಾನು ಪೊಲೀಸ್ ಠಾಣೆಗೆ ಹೋದೆನು. ಪೊಲೀಸ್ ಠಾಣೆಯಲ್ಲಿ 2 ನೇ ಆರೋಪಿ ಶ್ರೀನಿಧಿ ಪ್ಯಾಂಟನ್ನು ಕೊಟ್ಟರು. ಠಾಣೆಯಲ್ಲಿ ಪೊಲೀಸರು 2 ನೇ ಆರೋಪಿ ಶ್ರೀನಿಧಿ ರವರಿಂದ ಪ್ಯಾಂಟಂನ್ನು ಪಡೆದುಕೊಂಡರು. ಹೊಡೆದಾಟ ಆಗಿದ್ದಾಗ ಇದೇ ಪ್ಯಾಂಟ್ ಇತ್ತು ಅಂತ ಹೇಳಿ 2 ನೇ ಆರೋಪಿ ಶ್ರೀನಿಧಿ ಕೊಟ್ಟರು. ಸದರಿ ಪ್ಯಾಂಟ್ ನೀಲಿ ಬಣ್ಣದ ನೈಟ್ ಪ್ಯಾಂಟ್ ಆಗಿತ್ತು. ಪೊಲೀಸರು ಇವುಗಳನ್ನು ಪಡೆದುಕೊಂಡಿದಕ್ಕೆ ನನ್ನ ಸಹಿಯನ್ನು ಹಾಕಿಸಿಕೊಂಡರು. ಚಾಸಾ.3 ರಘು ಮತ್ತು ಪೊಲೀಸ್ ನವರು ಆ ಸಮಯದಲ್ಲಿ ಇದ್ದರು. ಸುಮಾರು ರಾತ್ರಿ 11.30 ಗಂಟವರೆಗೆ ಪೊಲೀಸರ್ ಠಾಣೆಯಲ್ಲಿ ಇದ್ದೆನ. ಈಗ ನನಗೆ ತೋರಿಸಿದ ನಿಪಿ.19 ಮಹಜರ್ ನಲ್ಲಿ ನನ್ನ ಸಹಿ

ಇದ್ದು, ಅದನ್ನು ನಿಪಿ.19(ಬಿ) ಎಂದು ಗುರುತಿಸಲಾಯಿತು. ಪ್ಯಾಂಟನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.12 ಪ್ಯಾಂಟನ್ನು ನೋಡಿ ಗುರುತಿಸಿದ್ದಾರೆ. ಮು.ಮಾ.12 ಪ್ಯಾಂಟ್ ಹಾಕಿರುವ ಬಿಳಿ ಚೀಲದ ಮೇಲೆ ಅಂಟಿಸಿರುವ ಚೀಟಯಲಲ್ಲಿ ನನ್ನ ಸಹಿ ಇದೆ. ಅದನ್ನು ಮು.ಮಾ.12(ಎ) ಎಂದು ಗುರುತಿಸಲಾಯಿತು.

ಠಾಣೆಯಲ್ಲಿ ಇದ್ದ ಶ್ರೀನಿಧಿಯನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿ ಶ್ರೀನಿಧಿಯನ್ನು ನೋಡಿ ಗುರುತಿಸಿದ್ದಾರೆ. ಈಗ ನನಗೆ ತೋರಿಸಿದ 4 ಫೋಟೋಗಳಲ್ಲಿ ನಾನು, 2 ನೇ ಆರೋಪಿ ಶ್ರೀನಿಧಿ, ಚಾಸಾ.3 ರಘು ಮತ್ತು ಪೊಲೀಸರ್ ನವರು ಇದ್ದೇವೆ. ಸದರಿ ಫೋಟೋಗಳನ್ನು ನಿಪಿ.23 ರಿಂದ 26 ಎಂದು ಗುರುತಿಸಲಾಯಿತು.

ಮಾರನೆಯ ದಿವಸ ಪೊಲೀಸರು, ಮದ್ಯಾಹ್ನ 1.45 ರಿಂದ 2.00 ಗಂಟೆ ಅವಧಿಯಲ್ಲಿ ಪೊಲೀಸ್ ಠಾಣೆಗೆ ನನ್ನನ್ನು ಕರೆಸಿಕೊಂಡಿದ್ದರು. ಇನ್ನೊಬ್ಬರಿಂದ ಪ್ಯಾಂಟನ್ನು ಪಡೆದುಕೊಳ್ಳುತ್ತಿದ್ದೇವೆ ಬನ್ನಿ ಅಂತ ಕರೆಸಿಕೊಂಡಿದ್ದರು. ಇನ್ನೊಬ್ಬರ ಹೆಸರು ಶಂಕರ ಎಂದು ಹೇಳಿದರು. ನಾನು ಮದ್ಯಾಹ್ನ 1.45 ರಿಂದ 2.00 ಗಂಟೆ ಅವಧಿಯಲ್ಲಿ ಪೊಲೀಸ್ ಠಾಣೆಗೆ ಹೋದೆನು. ಠಾಣೆಯಲ್ಲಿ ನಾನು, ಚಾಸಾ.3 ರಘು, ಪೊಲೀಸರು, ಶಂಕರ ಇದ್ದೆವು. ನಾನು ಪೊಲೀಸ್ ಠಾಣೆಯಲ್ಲಿ ಸುಮಾರು 3.15 ರಿಂದ 3.45 ಗಂಟೆವರೆಗೆ ಇದ್ದೆನು. ಪೊಲೀಸರು ಶಂಕರ್ ರವರಿಂದ ಪ್ಯಾಂಟನ್ನು ಪಡೆದುಕೊಂಡರು. ಶಂಕರ್ ರವರು, ಗಲಾಟೆಯಾಗಿದ್ದ ಇದೇ ಪ್ಯಾಂಟನ್ನು ಹಾಕಿಕೊಂಡಿದ್ದೆ ಅಂತ ಮಾಹಿತಿಯನ್ನು ಕೊಟ್ಟರು. ಸಿಮೆಂಟ್ ಬಣ್ಣದ ಕಾಟನ್ ಪ್ಯಾಂಟ್ ಆಗಿತ್ತು. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ.14 ಪ್ಯಾಂಟನ್ನು ನೋಡಿ ಗುರುತಿಸಿದ್ದಾರೆ. ಸದರಿ ಪ್ಯಾಂಟ್ ಇರುವ ಚೀಲದ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ಮು.ಮಾ.14(ಎ) ಎಂದು ಗುರುತಿಸಲಾಯಿತು. ಪ್ಯಾಂಟನ್ನು ತೆಗೆದುಕೊಂಡು ಪೊಲೀಸರು ನನ್ನ ಮತ್ತು ಚಾಸಾ.3 ರವರ ಸಹಿಯನ್ನು ಮಹಜರ್ ಗೆ ಹಾಕಿಸಿಕೊಂಡರು. ಈಗ ನನಗೆ ತೋರಿಸಿದ ನಿಪಿ.20 ಮಹಜರ್ ನಲ್ಲಿ ನನ್ನ ಸಹಿ ಇದ್ದು, ಅದನ್ನು ನಿಪಿ.20(ಬಿ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ 4 ಫೋಟೋಗಳಲ್ಲಿ ನಾನು, ಚಾಸಾ.3 ರಘು, ಪೊಲೀಸರು ಮತ್ತು ಶಂಕರ್ ಇದ್ದೇವೆ. ಸದರಿ 4 ಫೋಟೋಗಳನ್ನು ನಿಪಿ.27 ರಿಂದ 30 ಎಂದು ಗುರುತಿಸಲಾಯಿತು. ಶಂಕರ್ ರವರನ್ನು ಈಗ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಶಂಕರ್ ಅನ್ನು ನೋಡಿ ಗುರುತಿಸಿರುತ್ತಾರೆ. ಶಂಕರ್ ಎಂಬ ವ್ಯಕ್ತಿ ಈ ದಿವಸ

ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ. ನನಗೆ ತೋರಿಸಿದ 3 ಪೊಲೀಸ್ ನೋಟೀಸ್ ಗಳಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸ್ ಗಳನ್ನು ಅನುಕ್ರಮವಾಗಿ ನಿಪಿ.31 ರಿಂದ 33 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿ ಇರುವ ನನ್ನ 3 ರುಜುಗಳನ್ನು ನಿಪಿ.31(ಎ), ನಿಪಿ.32(ಎ) ಮತ್ತು ನಿಪಿ.33(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ ಹೆಚ್.ಪಿ.ಎಂ. ವಕೀಲರು, ಅವರ ಹಿರಿಯ ವಕೀಲರು ಅನಾರೋಗ್ಯ ಇರುವ ಕಾರಣ ಬೆಂಗಳೂರಿನಿಂದ ಬರಲು ಸಾಧ್ಯವಾಗಿರುವುದಲ್ಲ ಎಂಬ ಕಾರಣವನ್ನು ನೀಡಿ ಪಾಟೀ ಸವಾಲಿಗೆ ಸಮಯವನ್ನು ಕೋರಿರುತಾರೆ, ನೀಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ದಿನಾಂಕಃ 21.02.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಗಿದೆ

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ.ಪಿ. ವಕೀಲರಿಂದಃ

2020 ನೇ ಇಸವಿಯಲ್ಲಿ ನಾನು 2 ನೇ ಪಿ.ಯು.ಸಿ.ಯನ್ನು ಪಿ.ಇ.ಎಸ್ ಕಾಲೇಜಿನಲ್ಲಿ ಓದುತ್ತಿದ್ದೆನು. ಚಾಸಾ.1 ತಿರುಮಲ, ಗಲಾಟೆಯಾದ ಮೇಲೆ ಗೊತ್ತು. ಚಾಸಾ.1 ಸಹಾ ಅದೇ ಕಾಲೇಜಿನಲ್ಲಿ ಓದುತ್ತಿದ್ದರು ಎಂದರೆ ಗೊತ್ತಿಲ್ಲ. ಚಾಸಾ.1 ರವರ ಪರಿಚಯ ಆದ ನಂತರವೂ ಸಹಾ ಅವರು ಎಲ್ಲಿ ಓದುತ್ತಿದ್ದಾರೆ, ಏನು ಓದುತ್ತಿದ್ದಾರೆ ಅನ್ನುವುದರ ಬಗ್ಗೆ ತಿಳಿದುಕೊಂಡಿಲ್ಲ. ಹಸು ಫಾರಂನ ಓನರ್ ಮರಿಗೌಡ ಬಡಾವಣೆಯ ಮೊದಲನೇ ಕ್ರಾಸ್ ನಲ್ಲಿ ಇದ್ದಾರೆ, ಅವರ ಹೆಸರು ನಿಶ್ಚಯ್. ಇವರ

ಮನೆಯಿಂದ ಮಹಜರ್ ಮಾಡಿದ ಸ್ಥಳಕ್ಕೆ 100 ಮೀಟರ್ ಆಗಬಹುದು. ನಾನು ಅವರ ಮನಗೆ ಹೋದಾಗ ನಿಶ್ಚಯ್ ಇರಲಿಲ್ಲ, ಅವರ ತಾಯಿ ಇದ್ದರು. ಪೊಲೀಸರು ನನ್ನನ್ನು ಬರುವಂತೆ ಕರೆದಾಗ ಸಮಯ ಮದ್ಯಾಹ್ನ 1.45 ಯಿಂದ 2.30 ಗಂಟೆ ಒಳಗೆ ಆಗಿತ್ತು. ಹಸುವಿನ ಫಾರಂನ ಓನರ್ ಮನೆಯಿಂದ ನಾನು ಕೀಯನ್ನು ತೆಗೆದುಕೊಂಡ ಮೇಲೆ, ಪೊಲೀಸರು ನನ್ನನ್ನು ಬರುವಂತೆ ಕರೆದರು. ಮಹಜರ್ ಸ್ಥಳದಲ್ಲಿ ನಾನು, 3-4 ಜನ ಪೊಲೀಸರು , ರಾಘು ಮತ್ತು ಚಾಸಾ.1 ತಿರುಮಲ ಇದ್ದೆವು. ಅಲ್ಲಿನ ಸುತ್ತಾ ಮುತ್ತಾ ಮನೆಯವರು ಮಹಜರ್ ಸ್ಥಳದಲ್ಲಿ ಇರುವ ಬಗ್ಗೆ ನಾನು ಗಮನಿಸಲಿಲ್ಲ. ಮನೆ ಇದ್ದ ಜಾಗದಿಂದ, ಪೂಲೀಸರು ನನ್ನನ್ನು ಮಹಜರ್ ಗೆ ಕರೆದಾಗ ನಾನು 50 ಮೀಟರ್ ದೂರದಲ್ಲಿ ಇದ್ದೆ ಹಾಗೂ ಆಟೋ ಸ್ಟ್ಯಾಂಡ್ ಬಳಿ ನಡೆದುಕೊಂಡು ಹೋಗುತ್ತಿದ್ದೆನು . ಮಹಜರ್ ಮಾಡಿದ ಮನೆಯು, ಮರಿಗೌಡ ಬಡಾವಣೆಯ 2 ನೇ ಕ್ರಾಸ್‌ನಲ್ಲಿ ಇತ್ತು. ಮನೆಯ ಬಾಗಿಲಿನ ಮುಂದೆ ಕಲ್ಲು ಇತ್ತು. ಮನೆಯ ಬಾಗಿಲಿನಿಂದ 3 ಹೆಜ್ಜೆ ಅಂತರದಲ್ಲಿ ಕಲ್ಲು ಇತ್ತು. ಚಾಸಾ.1 ರವರ ಕೈಗೆ ಮೈಗೆ ಬ್ಯಾಂಡೇಜ್ ಹಾಕಿದ್ದನ್ನು ನಾನು ಸರಿಯಾಗಿ ಗಮನಿಸಲಿಲ್ಲ, ಚಾಸಾ.1 ರವರಿಗೆ ಗಾಯಗಳಾಗಿತ್ತು. ಚಾಸಾ.1 ರವರಿಗೆ ಬ್ಯಾಂಡೇಜ್ ಕಟ್ಟಿರಲಿಲ್ಲ. ಮಹಜರ್ ಗೆ ಬರುವಂತೆ ಹೇಳಿ ನನಗೆ ಪೊಲೀಸರು ನೋಟೀಸ್ ಕೊಟ್ಟಿರಲಿಲ್ಲ. ಪೊಲೀಸರು ನನ್ನನ್ನು ಮಹಜರ್ ಗೆ ಬರುವಂತೆ ಕರೆದಿದ್ದರು, ನಾನು ಮಹಜರ್ ಜಾಗಕ್ಕೆ ಹೋದಾಗ ಮಹಜರ್ ಗೆ ಸಹಿ ಹಾಕಿದ್ದೆನು. ನಾನು ಮಹಜರ್ ಜಾಗಕ್ಕೆ ಹೋಗುವ ಸಮಯಕ್ಕೆ ಮಹಜರ್ ಬರೆದು ಆಗಿತ್ತು ಎಂದರೆ ಸರಿಯಲ್ಲ. ನಾನು ಮಹಜರ್ ಜಾಗಕ್ಕೆ ಹೋಗುವುದಕ್ಕಿಂತ ಮುಂಚೆ, ಮಹಜರ್ ಅನ್ನು ಶುರು ಮಾಡಿರಲಿಲ್ಲ. ಪೊಲೀಸರು ಸುಮಾರು ಒಂದು - ಒಂದುವರೆ ಗಂಟೆ ಕಾಲ ಸ್ಥಳದಲ್ಲಿ ಇದ್ದರು. ಪೊಲೀಸರು ಕೊನೆಯಲ್ಲಿ ನನ್ನ ಸಹಿಯನ್ನು ತೆಗೆದುಕೊಂಡರು. ಪೊಲೀಸರು ನನ್ನ ಸಹಿಯನ್ನು ತೆಗೆದುಕೊಂಡಾಗ ಮದ್ಯಾಹ್ನ 3.15 ಯಿಂದ 3.30 ಗಂಟೆ ಆಗಿರಬಹುದು. ನಾನು 2.30 ಗಿಂತ ಮುಂಚೆಯೇ ಸ್ಥಳಕ್ಕೆ ಹೋಗಿದ್ದೆನು. ಪೊಲೀಸರು ನನ್ನ ಸಮಕ್ಷಮದಲ್ಲಿ , ಸ್ಥಳದಲ್ಲಿ ಯಾವುದೇ ಮಹಜರ್ ಅನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಕುಡುಗೋಲು ಮತ್ತು ದೊಣ್ಣೆ, ಕಲ್ಲು ಬಿದಿದ್ದ ಜಾಗದಲ್ಲಿ ಅಕ್ಕ ಪಕ್ಕದಲ್ಲಿ ಬಿದ್ದಿತ್ತು . ಕುಡುಗೋಲು ಮತ್ತು ದೊಣ್ಣೆ, ಕಲ್ಲು ಬಿದಿದ್ದ ಜಾಗದಿಂದ ಅಂದಾಜು 2 ಅಡಿ ದೂರದಲ್ಲಿ ಬಿದ್ದಿತ್ತು. ಪೊಲೀಸರು ಅಳತೆ ಟೇಪನ್ನು ಹಿಡಿದುಕೊಂಡು ಅಳತೆ ಮಾಡಿದ್ದನ್ನು ನಾನು ಗಮನಿಸಲಿಲ್ಲ. ಪೊಲೀಸರ ನನ್ನ ಎದುರಿಗೆ ಸದರಿ ಮಹಜರ್ ಅನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ನನ್ನ ಸ್ನೇಹಿತ ಆಗಿರುವುದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದಾದ ನಂತರ ಪೊಲೀಸರು ಮತ್ತೆ ನನಗೆ ರಾತ್ರಿ 9.30 ಅಥವಾ 9.45 ಗಂಟೆಗೆ ಫೋನ್ ಮಾಡಿದ್ದರು. ನಾನು ಪೊಲೀಸ್ ಠಾಣೆಗೆ ಹೋದಾಗ ಎಷ್ಟು ಸಮಯ ಆಗಿತ್ತು ಅನ್ನುವುದನ್ನು ನಾನು ಗಮನಿಸಿಕೊಳ್ಳಲಿಲ್ಲ (ನೋಡಿಕೊಳ್ಳಲಿಲ್ಲ).

ನಾನು ಠಾಣೆಗೆ ಹೋದಾಗ 2 ನೇ ಆರೋಪಿ ಶ್ರೀನಿಧಿ ಪೊಲೀಸ್ ಠಾಣೆ ಒಳಗೆ ಇದ್ದರು, ಯಾವ ಕೋಣೆಯಲ್ಲಿ ಇದ್ದರು ಅಂತ ಗೊತ್ತಿಲ್ಲ. ಮಹಜರ್ ನಲ್ಲಿ, ಪೊಲೀಸ್ ಠಾಣೆಯಲ್ಲಿ ಯಾವ ಕೋಣೆಯಲ್ಲಿ, ಯಾರ ಮುಂದೆ 2 ನೇ ಆರೋಪಿ ಬಟ್ಟೆಯನ್ನು ಕೊಟ್ಟಿದ್ದರು ಅಂತ ಬರೆದಿದ್ದರೋ ಇಲ್ಲವೋ ಎಂಬುದನ್ನು ನಾನು ಗಮನಿಸಲಿಲ್ಲ. 2 ನೇ ಆರೋಪಿ ಶ್ರೀನಿಧಿಯನ್ನು ಎಷ್ಟು ಗಂಟೆಗೆ ದಸ್ತಗಿರಿ ಮಾಡಿದರು ಅಂತ ಪೊಲೀಸರು ನನಗೆ ಹೇಳಲಿಲ್ಲ. ನನ್ನ ಮುಂದೆ ಪೊಲೀಸರು 2 ನೇ ಆರೋಪಿ ಶ್ರೀನಿಧಿಯನ್ನು ವಿಚಾರಣೆ ಮಾಡಲಿಲ್ಲ.

(ಮುಂಜಾನೆಯ ನ್ಯಾಯಾಲಯದ ಕಲಾಪದ ಅವಧಿ ಮುಗಿದಿದ್ದರಿಂದ , ಮುಂದುವರಿದ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

<u>ದಿನಾಂಕಃ 21.02.2023 ರಂದು ಮದ್ಯಾಹ್ನ ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋದಿಸಲಾಗಿದೆ</u>

<u>ಮುಂದುವರಿದ ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ.ಪಿ. ವಕೀಲರಿಂದಃ</u>

ಮಹಜರ್ ಸಮಯದಲ್ಲಿ ಬಟ್ಟೆಯನ್ನು ತೆಗೆದುಕೊಂಡು ಹೋದ ಪೊಲೀಸರ ಹೆಸರು ಗೊತ್ತಿಲ್ಲ, ಅವರು ಪೊಲೀಸ್ ಇನ್ಸ್ ಪೆಕ್ಟರ್ ಆಗಿದ್ದರು. ಬಟ್ಟೆ 2 ನೇ ಆರೋಪಿ ಶ್ರೀ ನಿಧಿ ಕೈಯಲ್ಲಿ ಇತ್ತು. ಸದರಿ ಬಟ್ಟೆಗಳನ್ನು ಯಾರು ತಂದಿದ್ದರು ಹಾಗೂ ಎಲ್ಲಿಂದ ತಂದಿದ್ದರು ಅಂತ ನನಗೆ ಹೇಳಲಿಲ್ಲ. ಮಹಜರ್ ನಲ್ಲಿ ಏನು ಬರೆದಿದೆ ಅಂತ ಪೊಲೀಸರು ನನಗೆ ಓದಿ ಹೇಳಲಿಲ್ಲ. ನಾನು ಸಹಿ ಹಾಕುವುದಕ್ಕಿಂತ ಮುಂಚೆ ಮಹಜರ್ ಅನ್ನು ಓದಲಿಲ್ಲ. ದಿನಾಂಕ 30.09.2020 ರಂದು ಪೊಲೀಸರು ನಿಪಿ.19 ಮಹಜರ್ ನಲ್ಲಿ ಬರೆದಿರುವಂತೆ , ನನ್ನ ಮುಂದೆ ಮಹಜರ್ ಅನ್ನು ಮಾಡಿರಲಿಲ್ಲ ಎಂದರೆ

ಸರಿಯಲ್ಲ ಹಾಗೂ 2ನೇ ಆರೋಪಿ ಶ್ರೀ ನಿಧಿ ಯಾವುದೇ ಬಟ್ಟೆಯನ್ನು ಪೊಲೀಸರಿಗೆ ನನ್ನ ಮುಂದೆ ಹಾಜರು ಮಾಡಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಮಹಜರ್ ಕ್ರಮವನ್ನು ಜರುಗಿಸದೆ ಇದ್ದರೂ, ನನ್ನ ಮುಂದೆ ಮಹಜರ್ ಮಾಡಿದರು ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನಗೆ ಮತ್ತೆ ಮತ್ತೆ ಬರಬೇಕಾಗುತ್ತದೆ ಅಂತ ಹೇಳಿರಲಿಲ್ಲ. 1ನೇ ತಾರೀಖಿನಂದು ಪೊಲೀಸರು ಮದ್ಯಾಹ್ನ 1.30 ಗಂಟೆಗೆ ಬಾ ಅಂತ ನನಗೆ ಫೋನ್ ಮಾಡಿದರು. ನಾನು ಮದ್ಯಾಹ್ನ 1.45 ಗಂಟೆಗೆ ಪೊಲೀಸ್ ಠಾಣೆಗೆ ಹೋದೆನು. ಪೊಲೀಸ್ ಠಾಣೆಗೆ ಹೋದ ಕೂಡಲೇ , ಮಹಜರ್ ಕ್ರಮವನ್ನು ಶುರು ಮಾಡಿದರು. ಆಗ ಪೊಲೀಸರು 1ನೇ ಆರೋಪಿ ಶಂಕರ್ ನನ್ನು ಎಷ್ಟು ಗಂಟೆಗೆ ದಸ್ತಗಿರಿ ಮಾಡಿದರು ಅಂತ ನನಗೆ ಹೇಳಲಿಲ್ಲ. ನನ್ನ ಎದುರಿಗೆ 1ನೇ ಆರೋಪಿ ಶಂಕರ್ ಅನ್ನು ವಿಚಾರಣೆ ಮಾಡಲಿಲ್ಲ. ನಾನು 1ನೇ ಆರೋಪಿ ಶಂಕರ್ ಮತ್ತು 2ನೇ ಆರೋಪಿ ಶ್ರೀನಿಧಿಯನ್ನು ಮಾತನಾಡಲಿಸಲಿಲ್ಲ. ಪೊಲೀಸ್ ಠಾಣೆಯಲ್ಲಿ, ಮೊದಲನೇ ಮಹಜರ್ ಅನ್ನು ಮಾಡಿದ ಕೋಣೆಯಲೇ ಸದರಿ ಮಹಜರ್ ಅನ್ನು ಮಾಡಿದರು. ಪೊಲೀಸ್ ಠಾಣೆಯಲ್ಲಿ ಎಷ್ಟು ಕೋಣೆಗಳು ಇದ್ದವು ಎಂಬುದನ್ನು ನಾನು ಗಮನಿಸಲಿಲ್ಲ. ನನ್ನನ್ನು ಕರೆಸಿದಂತಹ ಪೊಲೀಸ್ ಅಧಿಕಾರಿ ಹೆಸರು ಗೊತ್ತಿಲ್ಲ. ಬಟ್ಟೆ 1ನೇ ಆರೋಪಿ ಶಂಕರ್ ಎಂಬುವರ ಕೈಯಲ್ಲಿ ಇತ್ತು. 1 ಮತ್ತು 2ನೇ ಆರೋಪಿಗಳು ಬೇರೆ ಬಟ್ಟೆಗಳು ಹಾಕಿದ್ದನ್ನು ನಾನು ಗಮನಿಸಲಿಲ್ಲ. ನಿಪಿ.20 ಮಹಜರ್ ಅನ್ನು ಪೊಲೀಸರು ನನಗೆ ಓದಿ ಹೇಳಿದರು. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ಮೂರು ಮಹಜರ್ ಗಳನ್ನು ಮಾಡಿರಲಿಲ್ಲ ಹಾಗೂ 3 ಮಹಜರ್ ಗೆ ನಾನು ಸಹಿ ಮಾಡಿರಲಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.1 ತಿರುಮಲ ಅವರ ತಂದೆ ತಾಯಿ , ಈ ದಿವಸ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ.1 ತಿರುಮಲ ಮತ್ತು ಅವರ ತಂದೆಯನ್ನು ನಾನು ಗಮನಿಸಿಲ್ಲ, ಅವರ ತಾಯಿ ಬಂದಿರುವುದನ್ನು ಗಮನಿಸಿದ್ದೇನೆ ಎಂದು ಹೇಳುತ್ತಾರೆ. ನಾನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಚಾಸಾ.1 ತಿರುಮಲ ಜೊತೆಯಲ್ಲಿ ಬಂದಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ</u> ಃ ಏನು ಇಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.